ಧಾರಾವಾಹಿಯ ದಿಡ್ಡಿಬಾಗಿಲು ತೆರೆದುಕೊಂಡಿತು. ಕೇಬಲ್ ಜಾಲಗಳು ದೇಶದ ಉದ್ದಗಲಕ್ಕೂ ಹರಡಿಕೊಳ್ಳ ತೊಡಗಿದವು. ಕನ್ನಡದಲ್ಲಿ 'ಬಿಸಿಲು ಕುದುರೆ', 'ಕಂಡಕ್ಟರ್ ಕರಿಯಪ್ಪ', 'ಕ್ರೇಜಿ ಕರ್ನಲ್', 'ನಿಮ್ಮ ಕಂಪನಿ' ತರಹದ ಧಾರಾವಾಹಿಗಳ ರುಚಿ ಕಂಡಿದ್ದ ಪ್ರೇಕ್ಷಕರಿಗೆ 'ಮನೆತನ', 'ಜನನಿ' ತರಹದ ಮೆಗಾ ಧಾರಾವಾಹಿಗಳ ನಿತ್ಯ ಕಂತುಗಳ ರಂಜನೆ ಶುರುವಾಯಿತು.

ಮೆಗಾ ಧಾರಾವಾಹಿಗಳು ನಿತ್ಯ ಉಣಬಡಿಸಬೇಕಾದ್ದರಿಂದ ಅದಕ್ಕೆ ಹೂರಣ ಹಾಕುವವರೂ ಬೇಕಾಯಿತು. ಹಣ ಹಾಗೂ ಬುದ್ಧಿಮತ್ತೆಯ ಇನ್ವೆಸ್ಟ್‌ಮೆಂಟ್ ಮಾಡಿದವರಲ್ಲಿ ಕೆಲವರು ಗೆದ್ದರು. ಆದರೆ, ಎಲ್ಲರಿಗಿಂತ ಹೆಚ್ಚು ಗೆದ್ದದ್ದು ಏಕ್ತಾ ಕಪೂರ್ ಎಂಬ ಅಗಲ ಕುಂಕುಮದ ದಿಟ್ಟೆ. 'ಕ್ಯೋಂಕಿ ಸಾಸ್ ಭೀ ಕಭೀ ಬಹೂ ಥೀ', 'ಕಸೌಟಿ ಜಿಂದಗಿ ಕೀ' ತರಹದ ಸೋಪ್ ಒಪೆರಾಗಳ ಮೂಲಕ ಅವರು ಶ್ರೀಮಂತ ಕುಟುಂಬಗಳ ಪಡಸಾಲೆಗಳನ್ನು ತೆರೆದಿಟ್ಟರು. ದಿವಿನಾಗಿ ಸೀರೆಯುಟ್ಟ ನಾರಿಯರ ಹುಳ್ಳು ಮನಸ್ಸುಗಳನ್ನು ಬಂಡವಾಳ ಮಾಡಿಕೊಂಡರು. ಘಟವಾಣಿಯನ್ನೂ ಸೌಮ್ಯ ಸುಂದರಿಯನ್ನೂ ಎದುರು-ಬದಿರಾಗಿಸಿದರು. ಮನೆಯೊಳಗಿನ ಹುನ್ನಾರ, ವ್ಯಭಿಚಾರಗಳನ್ನು ಇಸ್ತ್ರಿ ಮಾಡಿದರು.

ನೋಡಲು ಸುಂದರವಾಗಿರುವ ಹೆಣ್ಣುಮಕ್ಕಳ ಬಗೆ ಬಗೆಯ ಮನೋಲೋಕವೇ ಮೆಗಾ ಧಾರಾವಾಹಿಯ ಹಣೆಬರಹ ಎನ್ನುವ ಸಂಕಥನವೊಂದನ್ನು ಏಕ್ತಾ ಕಪೂರ್ ಸೃಷ್ಟಿಸಿದರು. ಅದನ್ನೇ ಉದಯ ಟೀವಿ ಕಣ್ಣಿಗೊತ್ತಿಕೊಂಡಿತು. 'ಕಾವ್ಯಾಂಜಲಿ' ದೀರ್ಘ ಕಾಲ ವೀಕ್ಷಕರನ್ನು ಹಿಡಿದಿಟ್ಟಿತು. ಅದೇ ಚಾನೆಲ್‌ಗೆ ಬಿ. ಸುರೇಶ, ಎಸ್. ನಾರಾಯಣ್, ನಾಗತಿಹಳ್ಳಿ ಚಂದ್ರಶೇಖರ, ಫಣಿ ರಾಮಚಂದ್ರ ತರಹದವರು ಲಗ್ಗೆ ಇಟ್ಟರು. ನಡುವೆ 'ಮಾಯಾಮೃಗ'ದಂಥ ಸೂಕ್ಷ್ಮ ಸಂವೇದನೆಯ ಮಧ್ಯಮವರ್ಗದ ಹೆಣ್ಣುಮಕ್ಕಳ ಕಥನವನ್ನು ಟಿ.ಎನ್. ಸೀತಾರಾಂ ಕಟ್ಟಿಕೊಟ್ಟರು.

ಇವತ್ತಿನ ಗಾಂಧಿನಗರದ ಮೆಗಾತಾರೆಯರ ಕಡೆಗೊಮ್ಮೆ ನೋಡಿ. ದರ್ಶನ್ 'ಅಂಬಿಕಾ' ಎಂಬ ಧಾರಾವಾಹಿ ಮೂಲಕವೇ ಪರಿಚಿತರಾದವರು. ಗಣೇಶ್ ಕೂಡ 'ಗೋಲ್ಡನ್ ಸ್ಟಾರ್' ಆಗುವ ಮೊದಲು ಕಚಗುಳಿ ಇಡುವ ಧಾರಾವಾಹಿಗಳ ಪ್ರಾಡಕ್ಟೇ ಆಗಿದ್ದವರು. ಯಶ್, ರಾಧಿಕಾ ಪಂಡಿತ್ ಇಬ್ಬರ ಮೂಲವೂ ಕಿರುತೆರೆಯ ಧಾರಾವಾಹಿಗಳೇ. ನಾಗತಿಹಳ್ಳಿ 'ವಠಾರ' ಧಾರಾವಾಹಿ ಮಾಡಿ ಸುದೀರ್ಘ ಕಾಲ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡರು.

'ಸಿಹಿ ಕಹಿ' ಧಾರಾವಾಹಿ ಮೂಲಕ ಬಹಳ ಹಿಂದೆಯೇ ಛಾಪು ಮೂಡಿಸಿದ್ದೇ ಅಲ್ಲದೆ ತಮ್ಮ ಹೆಸರಿನ ಪಕ್ಕ ಅದೇ ವಿಶೇಷಣ ಉಳಿಯುವಂತೆ ನೋಡಿಕೊಂಡ ಚಂದ್ರು, ಧಾರಾವಾಹಿಯನ್ನು ಶಿಸ್ತುಬದ್ಧ ಉದ್ಯಮವನ್ನಾಗಿ ಪರಿವರ್ತಿಸಿಕೊಂಡರು. ಅವರ ಹಾಸ್ಯ ಧಾರಾವಾಹಿಗಳಲ್ಲಿ ನಟಿಸಿದವರು ಬೇರೆ ಧಾರಾವಾಹಿಗಳಲ್ಲಿ ನಟಿಸುತ್ತಿರಲಿಲ್ಲ. ಅಂಥ ಒಪ್ಪಂದ ಮಾಡಿಕೊಂಡರು. ಅದರ ಫಲ ದೊಡ್ಡದು. ಈಗಲೂ 'ಪಾಪ ಪಾಂಡು' ಕಡೆ ನೋಡಿ. ಹಳೆಯದ್ದೇ ಆತ್ಮ. ಹೊಸ ಚಹರೆಗಳು. ಪಾಚು, ಪಾಂಡುವಿನ ಮಕ್ಕಳೀಗ ನುಲಿಯುತ್ತಾರೆ, ನಲಿಯುತ್ತಾರೆ, ನೋಡುಗರಿಗೆ ಕಚಗುಳಿ ಇಡುತ್ತಾರೆ.


'ಕಮಲಿ' ಧಾರಾವಾಹಿಯ ಪಾತ್ರಧಾರಿ



ಏಕ್ತಾ ಕಪೂರ್ ಹಣೆಗಿಟ್ಟ ಕುಂಕುಮಗಳೂ ಈಗ ಬೇರೆ ಆಕಾರಗಳನ್ನು ಪಡೆದುಕೊಂಡಿವೆ. ಹೆಣ್ಣುಮಕ್ಕಳು ಚೆಂದದ ಸೀರೆ ಉಡುತ್ತಾರೆ. ಹುನ್ನಾರವನ್ನೂ ಚೆನ್ನಾಗಿಯೇ ಹೊಸೆಯುತ್ತಾರೆ. ಸಂಬಂಧಗಳಲ್ಲಂತೂ ಸುಕ್ಕು ಸುಕ್ಕು ಆಟ. ವಿಜ್ಞಾನ ದೀವಿಗೆ ಹಿಡಿದ ಕಾಲದಲ್ಲೂ ಮಂತ್ರವಾದಿಯ ಧಾರಾವಾಹಿಗಳ ಹಂಗು. 'ಶನಿ' ಮಹಾತ್ಮೆಯೂ ಬೇಕು. 'ಮಹದೇವ'ನ ಮೈಕಟ್ಟೀಗ ಸೊಗಸು. 'ದೇವಿ'ಯ ಚಕ್ರದಾಟ ಕಂಡು ಪುಳಕಿತರಾದ ಭಕ್ತರಿಗೆ ಈಗ ಮಹಾದೇವಿಯ 'ತ್ರಿಶೂಲ'ದ ಹಂಗು. ದ್ವೇಷ ಕಾರುವ ಹಾವು ನಾಲಗೆ ಆಚೆಗೆ ಹಾಕಿ ಆಡಿಸುವುದನ್ನೂ ಆಧುನಿಕರು ನೋಡುತ್ತಾರೆ.

ಧಾರಾವಾಹಿಗಳ ಆತ್ಮವನ್ನೊಮ್ಮೆ ಕೆದಕಿ. ಅದೇ ಹಳತು. ಆದರೆ 'ದರ್ಶನ'ದ ಬಗೆ ಮಾತ್ರ ಬೇರೆ. ಸಾಯಿಸುತೆ ಬರೆದ ಕಾದಂಬರಿಗಳಲ್ಲಿ ಒಡವೆ- ವಸ್ತ್ರಗಳ ವರ್ಣನೆ ಇತ್ತಲ್ಲವೇ? ಈಗ ಧಾರಾವಾಹಿಗಳಲ್ಲಿ ಅವುಗಳ ದರ್ಶನ. ಅಲ್ಲೂ ಬರೆಯಬೇಕಿತ್ತು. ಬರೆದು ಕಲ್ಪನೆ ಸಾಕಾರಗೊಳ್ಳುವಂತೆ ಮಾಡಬೇಕಿತ್ತು. ಈಗ ಬರೆಯಬೇಕು. ಪರದೆ ಮೇಲೆ ತೋರುವಂತಿರಬೇಕು.

ಹಾಗೆ ನೋಡಿದರೆ ನಮ್ಮ ಧಾರಾವಾಹಿಗಳಿಗೆ ಅಂಥ 'ನೇಟಿವಿಟಿ'ಯೇನೂ ಈಗ ಉಳಿದಿಲ್ಲ. ಹಿಂದಿಯ ಯಶಸ್ವಿ ಧಾರಾವಾಹಿಯ ಸೂತ್ರವನ್ನೇ ದಕ್ಷಿಣದವರೂ ಕಣ್ಣಿಗೊತ್ತಿಕೊಳ್ಳಲು ಆರಂಭಿಸಿ ಎರಡು ದಶಕಗಳೇ ಕಳೆದಿವೆ. ಅಲ್ಲಿಯ ಹಣೆಬೊಟ್ಟೇ ಇಲ್ಲಿನ ಇನ್ನೊಬ್ಬ ಹೆಣ್ಣುಮಗಳಿಗೆ ವರ್ಗವಾಗುತ್ತದೆ. ಅಲ್ಲಿನ ದಿವಿನಾದ ಸೀರೆ ಇಲ್ಲಿನ ನೀರೆ ಮೇಲೆ!

ಈಗ ಹೇಳಿ, ಸೀರಿಯಲ್ ಕಿಲ್ಲರ್ಸ್ ಯಾರು?

ಅಭಯ್